ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ ,ಸಿರಿಗೆರೆ

# ತರಳಬಾಳು "ಕೃಷಿ ಸಿಂಚನ"

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-294568
ಜುಲೈ - ಸೆಪ್ಟಂಬರ್ 2008

ತ್ರೈಮಾಸಿಕ ಪತ್ರಿಕೆ
(Quarterly News Letter)

ಮಿಂಚಂಚೆ : tkvk@taralabalu.org
ಸಂಪುಟ 1. ಸಂಚಿಕೆ : 4



ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಉಪಾಧ್ಯಕ್ಷರು, ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ ಇವರು ದಿನಾಂಕ 20-09-08 ರಂದು ಕೃಷಿ ವಿಜ್ಞಾನ ಕೇಂದ್ರದ ಕದಳಿವನದ ಪ್ರಾತ್ಯಕ್ಷಿಕಾ ತಾಕುಗಳಿಗೆ ಭೇಟಿ ನೀಡಿದರು. ನಂತರ ಕಟ್ಟಡಗಳಿಗೆ ಭೇಟಿ ನೀಡಿ ಮುಕ್ತಾಯ ಹಂತದ ಕಾರ್ಯಗಳನ್ನು ಪರಿಶೀಲಿಸಿದರು.



ಡಾ॥ ಸಿದ್ದಯ್ಯ ಸ್ವಾಮೀಜಿ, ಕಾರ್ಯದರ್ಶಿಗಳು, ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ ಇವರು ದಿನಾಂಕ 22-08-08 ರಂದು ಕೃಷಿ ವಿಜ್ಞಾನ ಕೇಂದ್ರದ ಕದಳಿವನದ ಪ್ರಾತ್ಯಕ್ಷಿಕಾ ತಾಕುಗಳಿಗೆ ಹಾಗೂ ಕಟ್ಟಡಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ನಂತರ ವಿಜ್ಞಾನಿಗಳೊಂದಿಗೆ ಸಮಾಲೋಚಿಸಿ, ಸಲಹೆ ಸೂಚನೆಗಳನ್ನು ನೀಡಿದರು.

## ಕೃಷಿ ಮಾಹಿತಿ ಶಿಬಿರ



ದಿನಾಂಕ 24–7–2008, ಬಸವಾಪಟ್ಟಣ, ಚನ್ನಗಿರಿ ತಾ॥

## ಆಚರಿಸಿದ ದಿನಗಳು



ದಿನಾಂಕ 30-8-08 ರಂದು 'ವಿಶ್ವ ಕೈತೋಟ ದಿನಾಚರಣೆ' ನಿಟ್ಟೂರು ಹರಿಹರ ತಾ॥



ದಿನಾಂಕ 5-9-08 ರಂದು 'ಪಾರ್ಥೇನಿಯಂ ಕಳೆ ನಿರ್ಮೂಲನಾ ಸಪ್ತಾಹ' ಬೂದಿಹಾಳ್, ಹರಪನಹಳ್ಳಿ ತಾ॥

## ಕ್ಷೇತ್ರೋತ್ಸವಗಳು




ದಿನಾಂಕ 29-9-2008 ರಂದು ಹರಪನಹಳ್ಳಿ ತಾಲ್ಲೂಕಿನ ಬೂದಿಹಾಳ್ ಗ್ರಾಮದಲ್ಲಿ "ಸೂರ್ಯಕಾಂತಿಯಲ್ಲಿ ಬೂದಿರೋಗ ನಿರೋಧಕ (ಕೆ.ಬಿ.ಎಸ್.ಹೆಚ್-53) ತಳಿ "

ದಿನಾಂಕ 29-9-2008 ರಂದು ಜಗಳೂರು ತಾಲ್ಲೂಕಿನ ಚಿಕ್ಕಬಂಟನಹಳ್ಳಿ ಗ್ರಾಮದಲ್ಲಿ " ನವಣೆಯಲ್ಲಿ ಸುಧಾರಿತ ಬೇಸಾಯ ಕ್ರಮಗಳು"



## ಆಯೋಜಿಸಿದ ಕಾರ್ಯಕ್ರಮದಲ್ಲಿ ಕೇಂದ್ರದ ವಿಜ್ಞಾನಿಗಳು ಭಾಗವಹಿಸಿ ನೀಡಿದ ತರಬೇತಿ ಕಾರ್ಯಕ್ರಮಗಳು :





- ಜಿಲ್ಲಾ ಜಲಾನಯನ ಇಲಾಖೆ, ಜಿಲ್ಲಾ ಪಂಚಾಯಿತಿ, ದಾವಣಗೆರೆ ಹಾಗೂ ಕೇಂದ್ರದ ಸಹಯೋಗದೊಂದಿಗೆ ದಿನಾಂಕ 8-9-2008 ರಂದು "ಜಲವಿನ್ಯಾಸಗಳಲ್ಲಿ ಮೀನುಗಾರಿಕೆ ಅಭಿವೃದ್ಧಿ" ಕುರಿತು ದಾವಣಗೆರೆ ಜಿಲ್ಲೆಯ ಜಿಲ್ಲಾ ಜಲಾನಯನ ಇಲಾಖೆಯ ವಿಸ್ತಾರಣಾ ಕಾರ್ಯಕರ್ತರಿಗೆ ಕೇಂದ್ರದ ಮುಖ್ಯಸ್ಥರು ಮತ್ತು ಮೀನುಗಾರಿಕಾ ತಜ್ಞರಾದ ಡಾ. ದೇವರಾಜ ಟಿ.ಎನ್. ಇವರು ತರಬೇತಿಯನ್ನು ನೀಡಿದರು.
- ಕೇಂದ್ರದ ಸಸ್ಯ ಸಂರಕ್ಷಣಾ ತಜ್ಞ ಶ್ರೀ ಪ್ರಸನ್ನ ಕುಮಾರ್ ಎನ್. ದಿನಾಂಕ 18-9-08 ರಂದು ಬೆಳ್ಳೂಡಿ, ಹರಿಹರ ತಾಲ್ಲೂಕು ವೀಳ್ಯದೆಲೆ ಆಶ್ರಿತ ಹಾಲುವಾಣ ಆಸರೆ ಬೆಳೆಯ ಕೀಟಭಾದಿತ ತೋಟಗಳಿಗೆ ತೋಟಗಾರಿಕಾ ಇಲಾಖೆ, ಹರಿಹರ ಅಧಿಕಾರಿಗಳ ಸಹಯೋಗದೊಂದಿಗೆ ವೈಜ್ಞಾನಿಕ ಭೇಟಿ ನೀಡಿ ಗುಂಪು ಚರ್ಚೆಯ ಮೂಲಕ ನಿರ್ವಹಣಾ ಕ್ರಮಗಳನ್ನು ತಿಳಿಸಿದರು.
- ತೋಟಗಾರಿಕಾ ಇಲಾಖೆ, ಹೊನ್ನಾಳಿ ಇವರ ಸಹಯೋಗದೊಂದಿಗೆ ದಿನಾಂಕ 29-7-2008 ರಂದು 'ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಮತ್ತು ಸಂರಕ್ಷಣೆ ಕುರಿತು ತಾಲ್ಲೂಕಿನ ರೈತ ಮಹಿಳೆಯರಿಗೆ ಕೇಂದ್ರದ ಗೃಹವಿಜ್ಞಾನಿ ಕವಿತಾ ಪಿ. ಇವರು ತರಬೇತಿಯನ್ನು ನೀಡಿದರು.
- ಮಂಗಳೂರು ಫರ್ಟಿಲೈಸರ್ಸ್ ಲಿಮಿಟೆಡ್ ಇವರ ಸಹಯೋಗದೊಂದಿಗೆ ಜಗಳೂರು ತಾಲ್ಲೂಕಿನ ಚಿಕ್ಕಬನ್ನಿಹಟ್ಟಿ ಗ್ರಾಮದಲ್ಲಿ ದಿನಾಂಕ 12-8-2008 ರಂದು 'ಈರುಳ್ಳಿಯಲ್ಲಿ ಬೀಜೋತ್ಪಾದನೆ ಮತ್ತು ಸಮಗ್ರ ಪೀಡೆ ನಿರ್ವಹಣೆ' ಕುರಿತು ತಾಲ್ಲೂಕಿನ ರೈತ ಮತ್ತು ರೈತ ಮಹಿಳೆಯರಿಗೆ ಕೇಂದ್ರದ ಶ್ರೀ ಪ್ರಸನ್ನಕುಮಾರ್ ಎನ್. ಇವರು ತರಬೇತಿಯನ್ನು ನೀಡಿದರು.
- ಪ್ರಗತಿ ಗ್ರಾಮೀಣ ಬ್ಯಾಂಕ್, ಅತ್ತಿಗೆರೆ ಶಾಖೆ ಇವರ ಸಹಯೋಗದೊಂದಿಗೆ ದಿನಾಂಕ 27-08-2008 ರಂದು "ಭತ್ತದ ಬೆಳೆ-ಆಧುನಿಕ ಪದ್ಧತಿಗಳ ಪರ್ಯಾಯ ಚಿಂತನೆ ಮತ್ತು ಪೀಡೆ ನಿರ್ವಹಣೆ" ಬಗ್ಗೆ ಕೇಂದ್ರದ ಬೇಸಾಯ ತಜ್ಞರಾದ ಶ್ರೀ ಮಲ್ಲಿಕಾರ್ಜುನ ಬಿ.ಓ. ಮತ್ತು ಶ್ರೀ ಪ್ರಸನ್ನಕುಮಾರ್ ಎನ್. ತರಬೇತಿ ನೀಡಿದರು.
- ರಾಷ್ಟ್ರೀಯ ತೋಟಗಾರಿಕೆ ಸಂಶೋಧನೆ ಮತ್ತು ಅಭಿವೃದ್ಧಿ ಮತ್ತು ಪ್ರತಿಷ್ಠಾನ, ಹುಬ್ಬಳ್ಳಿ ಇವರ ಸಹಯೋಗದೊಂದಿಗೆ ದಿನಾಂಕ 1-9-2008 ರಂದು "ತರಕಾರಿ ಬೆಳೆಗಳ ಬೇಸಾಯ ಹಾಗೂ ಮಾರಾಟ" ಕುರಿತು ಚಿಗಟೇರಿ ಗ್ರಾಮ, ಹರಪನಹಳ್ಳಿ, ತಾಲ್ಲೂಕಿನ ರೈತ/ರೈತಮಹಿಳೆಯರಿಗೆ ಕೇಂದ್ರದ ಶ್ರೀ ಪ್ರಸನ್ನ ಕುಮಾರ್ ಎನ್. ಮತ್ತು ತೋಟಗಾರಿಕೆ ತಜ್ಞ ಶ್ರೀ ಬಸವನಗೌಡ ಎಂ.ಜಿ. ತರಬೇತಿಯನ್ನು ನೀಡಿದರು.
- ತಾಲ್ಲೂಕು ಕೃಷಿ ಸಮಾಜ, ಕೃಷಿ ಮತ್ತು ತೋಟಗಾರಿಕೆ ಇಲಾಖೆ, ತಾಲ್ಲೂಕು ರೈತ ಸಂಘ ಮತ್ತು ರೋಟರಿ ಕ್ಲಬ್, ಚನ್ನಗಿರಿ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ 20-9-2008 ರಂದು 'ಆಲೂಗಡ್ಡೆ ತೋಟಗಾರಿಕೆ ಬೆಳೆ ಮತ್ತು ಕೃಷಿ ಬೆಳೆಗಳ ಬಗ್ಗೆ ವಿಚಾರ ಸಂಕೀರಣ' ಕುರಿತು ಮುಗಳೀಹಳ್ಳಿ ಗ್ರಾಮ, ಚನ್ನಗಿರಿ ತಾಲ್ಲೂಕಿನ ರೈತಮಹಿಳೆಯರಿಗೆ ಕೇಂದ್ರದ ಸಸ್ಯ ಸಂರಕ್ಷಣಾ ತಜ್ಞ ಶ್ರೀ ಪ್ರಸನ್ನ ಕುಮಾರ್ ಎನ್. ಮತ್ತು ತೋಟಗಾರಿಕೆ ತಜ್ಞ ಶ್ರೀ ಬಸವನಗೌಡ ಎಂ.ಜಿ. ತರಬೇತಿಯನ್ನು ನೀಡಿದರು.

### ಶೈಕ್ಷಣಿಕ ಭೇಟಿ

- ದಿನಾಂಕ 28-07-08 ಮತ್ತು 29-07-08 ರಂದು ಬೇಸಾಯ ತಜ್ಞರಾದ ಶ್ರೀ ಮಲ್ಲಿಕಾರ್ಜುನ ಬಿ.ಓ. ಮತ್ತು ಸಸ್ಯ ಸಂರಕ್ಷಣಾ ತಜ್ಞ ಶ್ರೀ ಪ್ರಸನ್ನಕುಮಾರ್ ಎನ್. ಇವರು ಕೃಷಿ ವಿಜ್ಞಾನ ಕೇಂದ್ರ, ಕಾಸರಗೋಡು ಕೇಂದ್ರಕ್ಕೆ ಭೇಟಿ ನೀಡಿ, ಅಲ್ಲಿ ಲಿಗ್ನಿನ್ ಇರುವಂತಹ ಕೃಷಿತ್ಯಾಜ್ಯ ವಸ್ತುಗಳನ್ನು ಜೀರ್ಣಿಸಿಕೊಳ್ಳುವ ಯುಡ್ರಿಲಸ್ ಜಾತಿಯ ವಿಶೇಷ ಎರೆಹುಳಗಳ ಬಗ್ಗೆ ಅಧ್ಯಯನ ನಡೆಸಿ ಹುಳುಗಳನ್ನು ನಮ್ಮ ಕೇಂದ್ರದಲ್ಲಿ ವಂಶಾಭಿವೃದ್ಧಿಗೆ ತಂದಿರುತ್ತಾರೆ.
- ಕೇಂದ್ರದ ಮುಖ್ಯಸ್ಥರೊಂದಿಗೆ ತೋಟಗಾರಿಕೆ, ಹೈನುಗಾರಿಕೆ ಮತ್ತು ವಿಸ್ತರಣಾ ವಿಭಾಗದ ವಿಷಯ ತಜ್ಞರುಗಳು ದಿನಾಂಕ 25-8-08 ರಿಂದ 27-08-08 ರವರೆಗೆ ನಾಮಕಲ್ ಹಾಗೂ ಧರ್ಮಪುರಿ ಕೃಷಿ ವಿಜ್ಞಾನ ಕೇಂದ್ರಗಳಿಗೆ ಮತ್ತು FRLHT, ಬೆಂಗಳೂರು ಕೇಂದ್ರಕ್ಕೆ ಬೇಟಿ ನೀಡಿ ಅಲ್ಲಿನ ಚಟುವಟಿಕೆಗಳನ್ನು ಅಧ್ಯಯನ ನಡೆಸಿರುತ್ತಾರೆ.

ಕೃಷಿ ಸಂಶೋಧನಾ ಕೇಂದ್ರ, ಕತ್ತಲಗೆರೆಗೆ ಭೇಟಿ ನೀಡಿರುವುದು



### ಹಮ್ಮಿಕೊಂಡ ತರಬೇತಿಗಳು :



- ಸೂರ್ಯಕಾಂತಿಯಲ್ಲಿ ಕಪ್ಪು ತಲೆ ಕಂಬಳಿ ಹುಳು ಮತ್ತು ನಂಜುರೋಗ ನಿರ್ವಹಣೆ ಹಾಗೂ ಬೋರಾಕ್ಸ್ ಸಿಂಪರಣೆಯ ಉಪಯೋಗಗಳು
- ಭತ್ತದ ಜಮೀನುಗಳಲ್ಲಿ ಮೀನು ಕೃಷಿ- ಒಂದು ಪರ್ಯಾಯ ಬೆಳೆ.
- ತೊಗರಿಯಲ್ಲಿ ಆಧುನಿಕ ಬೇಸಾಯ ಕ್ರಮಗಳು ಮತ್ತು ಪೀಡೆ ನಿರ್ವಹಣೆ
- ಆಹಾರದಲ್ಲಿ ಕಿರುಧಾನ್ಯಗಳ ಮಹತ್ವ ಮತ್ತು ಮೌಲ್ಯವರ್ಧಿತ ಉತ್ಪನ್ನಗಳು
- ಮೀನುಕೃಷಿಯಲ್ಲಿ ಸುಣ್ಣದ ಬಳಕೆ ಮತ್ತು ಮೌಲ್ಯವರ್ಧಿತ ಉತ್ಪನ್ನಗಳು
- ವಿವಿಧ ಬೆಳೆ ಮತ್ತು ಕೃಷಿ ಆಧಾರಿತ ಚಟುವಟಿಕೆಗಳ ಬಗ್ಗೆ ರೈತರೊಂದಿಗೆ ಚರ್ಚೆ
- ತಿಂಗಳ ಹುರುಳಿಯಲ್ಲಿ ಆಧುನಿಕ ಬೇಸಾಯ ಕ್ರಮಗಳು ಮತ್ತು ಸಸ್ಯ ಸಂರಕ್ಷಣೆ
- ಗೃಹ ಕೈಗಾರಿಕೆಯಲ್ಲಿ ಸೋಪಿನಪುಡಿ ಮತ್ತು ಇತರ ವಸ್ತುಗಳ ತಯಾರಿಕೆ
- ಹತ್ತಿಯಲ್ಲಿ ಮೋಹಕ ಬಲೆಗಳ ಬಳಕೆ ಮತ್ತು ಪೋಷಕಾಂಶಗಳ ನಿರ್ವಹಣೆ
- ಮೇವಿನ ಬೆಳೆಗಳ ಉತ್ಪಾದನೆ ಮತ್ತು ಪೌಷ್ಟಿಕತೆ
- ಸೂರ್ಯಕಾಂತಿಯಲ್ಲಿ ಆಧುನಿಕ ಬೇಸಾಯ ಕ್ರಮಗಳು
- ಏಕದಳ ಮತ್ತು ದ್ವಿದಳ ಧಾನ್ಯಗಳಲ್ಲಿ ರೋಗಗಳ ಪತ್ತೆಹಚ್ಚುವಿಕೆ ಮತ್ತು ಅವುಗಳ ಹತೋಟಿ ಕ್ರಮಗಳು
- ಈರುಳ್ಳಿ ಬೆಳೆಯ ಉತ್ಪಾದನಾ ತಾಂತ್ರಿಕತೆ ಮತ್ತು ಪೀಡೆ ನಿರ್ವಹಣೆ
- ಟೊಮ್ಯಾಟೋದಲ್ಲಿ ತರಕಾರಿ ಸ್ಪೆಷಲ್ ಬಳಕೆ
- ಹೈನುರಾಸುಗಳಲ್ಲಿ ಸಮತೋಲನ ಆಹಾರ ಪೂರೈಕೆ
- ಹಣ್ಣು ಮತ್ತು ತರಕಾರಿಗಳ ಸಂಸ್ಕರಣೆ ಮತ್ತು ಸಂರಕ್ಷಣೆ
- ಹತ್ತಿಯಲ್ಲಿ ಪ್ಲಾನೋಫಿಕ್ಸ್ ಮತ್ತು ಲಘು ಪೋಷಕಾಂಶಗಳ ಮಹತ್ವ

### ಪದ್ಧತಿ ಪ್ರಾತ್ಯಕ್ಷಿಕೆಗಳು



ಬಿ.ಟಿ. ಹತ್ತಿ ಬೀಜ ಬಿತ್ತನೆ



ತರಕಾರಿ ಸ್ಪೆಷಲ್ ಸಿಂಪರಣೆಗೆ ಮಿಶ್ರಣ ತಯಾರಿಕೆ



ಮೀನು ಕೃಷಿ ಕೊಳದಲ್ಲಿ ಚೀಲದಲ್ಲಿ ಆಹಾರ ನೀಡಿಕೆ



ಮಿಶ್ರ ಹಣ್ಣುಗಳ ಜಾಮ್ ತಯಾರಿಕೆ

# ಕ್ಷೇತ್ರ ಪ್ರಾತ್ಯಕ್ಷಿಕಾ ತಾಕುಗಳಿಗೆ ವೈಜ್ಞಾನಿಕ ಕ್ಷೇತ್ರ ಭೇಟಿ







## ಗಣ್ಯರ ಭೇಟಿ :




## ಉಪಗ್ರಹ ನೇರ ಪ್ರಸಾರ

ಗ್ರಾಮೀಣ ಸಂಪನ್ಮೂಲ ಕೇಂದ್ರ, ಕೃಷಿ ವಿಶ್ವವಿದ್ಯಾನಿಲಯ ಬೆಂಗಳೂರು ಹಾಗೂ ಇಸ್ರೋ ಇವರುಗಳ ಸಹಯೋಗದೊಂದಿಗೆ ಉಪಗ್ರಹ ನೇರ ಪ್ರಸಾರದ ಮೂಲಕ ಉಪನ್ಯಾಸ ಕಾರ್ಯಕ್ರಮಗಳು ನಿಯತವಾಗಿ ಪ್ರತಿ ಸೋಮವಾರ ಬೆಳಿಗ್ಗೆ 11 ಗಂಟೆಗೆ ನಡೆಯುತ್ತಿವೆ.



## ರೈತ ಕ್ಷೇತ್ರ ಪಾಠಶಾಲೆ




## ಕೇಂದ್ರದ ವಿಜ್ಞಾನಿಗಳು ಭಾಗವಹಿಸಿದ ಕಾರ್ಯಗಾರಗಳು / ಕಮ್ಮಟಗಳು / ವಿಚಾರ ಸಂಕಿರಣಗಳು/ ಸಭೆಗಳು /ಸಂಪನ್ಮೂಲ ವ್ಯಕ್ತಿಗಳಾಗಿ

ಡಾ. ದೇವರಾಜ ಟಿ.ಎನ್. ರವರು ಜಿಲ್ಲಾ ಪಂಚಾಯತಿ, ದಾವಣಗೆರೆಯಲ್ಲಿ ದಿನಾಂಕ 15 ಜುಲೈ, 08 ರಂದು ನಡೆದ ಮೊದಲನೇ ಹಂತದ 'ಆತ್ಮ' (ATMA) ಯೋಜನೆ ಕುರಿತು ಕಾರ್ಯಸೂಚಿ ಸಭೆಯಲ್ಲಿ ಭಾಗವಹಿಸಿರುತ್ತಾರೆ.

ದಿನಾಂಕ 20-08-2008, ಕೃಷಿ ವಿಜ್ಞಾನ ಕೇಂದ್ರ, ಶಿವಮೊಗ್ಗ "ಕೌಶಲ್ಯ ಅಭಿವೃದ್ಧಿ ತರಬೇತಿ" ಕಾರ್ಯಕ್ರಮದಲ್ಲಿ ಕೇಂದ್ರದ ಶ್ರೀ ಬಸವನಗೌಡ ಎಂ.ಜಿ. ಇವರು ಅತಿಥಿ ಉಪನ್ಯಾಸವನ್ನು ನೀಡಿದರು.

ಡಿ.ಬಿ.ಟಿ., ದೆಹಲಿಯಲ್ಲಿ ದಿನಾಂಕ 12 ಸೆಪ್ಟೆಂಬರ್ 2008 ರಂದು ಯೋಜನೆಗಳ ಕಾರ್ಯಸೂಚಿ ಸಭೆಯಲ್ಲಿ, ಕೇಂದ್ರದ ಮುಖ್ಯಸ್ಥರಾದ ಡಾ॥ ದೇವರಾಜ ಟಿ.ಎನ್. ರವರು "Establishment of Rural Bio Resource Complex for Sustainable Rural Livelihood Security through bio-technological approaches in Davangere district of Central Karnataka " ನ ಕ್ರಿಯಾ ಯೋಜನೆಯನ್ನು ಮಂಡಿಸಿದರು.

ಶ್ರೀ ಮಲ್ಲಿಕಾರ್ಜುನ ಬಿ.ಓ. ಮತ್ತು ಶ್ರೀ ರಘುರಾಜ ಜೆ. ರವರು ಜಂಟಿ ಕೃಷಿ ನಿರ್ದೇಶಕರು, ಚಿತ್ರದುರ್ಗ ಕಛೇರಿಯಲ್ಲಿ ದಿನಾಂಕ 13-09-08 ರಂದು ನಡೆದ 'ATMA- KVK linkage' ಯೋಜನೆ ಕುರಿತು ಕಾರ್ಯಸೂಚಿ ಸಭೆಯಲ್ಲಿ ಭಾಗವಹಿಸಿರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಬಿ. ಓ. ಇವರು ದಿನಾಂಕ 23-09-2008 ರಂದು ಆಕಾಶವಾಣಿ, ಭದ್ರಾವತಿಯಲ್ಲಿ ನಡೆದ ವೈಜ್ಞಾನಿಕ ಸಲಹಾ ಸಮಿತಿ ಸಭೆಯಲ್ಲಿ ಭಾಗವಹಿಸಿರುತ್ತಾರೆ,

## ಬಿತ್ತರಗೊಂಡ ನಮ್ಮ ಕಾರ್ಯಕ್ರಮಗಳು



### ಚಿತ್ರದುರ್ಗ ಆಕಾಶವಾಣಿ :

- ಪ್ರಸ್ತುತ ಕೃಷಿಯ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಪರ್ಯಾಯ ಮಾರ್ಗೋಪಾಯಗಳು - ಡಾ. ದೇವರಾಜ ಟಿ. ಎನ್., ಮಲ್ಲಿಕಾರ್ಜುನ ಬಿ.ಓ. ಮತ್ತು ಕವಿತಾ ಪಿ. (3-7-08)

### ಭದ್ರಾವತಿ ಆಕಾಶವಾಣಿ :

- ಸಮತೋಲನ ಆಹಾರ ಮತ್ತು ಪೌಷ್ಟಿಕಾಂಶಗಳ ಕೊರತೆಯಿಂದಾಗಿ ದುಷ್ಪರಿಣಾಮಗಳು (31-08-08)-ಕವಿತಾ ಪಿ.
- ಬೀಜೋತ್ಪಾದನೆ ತಾಂತ್ರಿಕತೆಗಳು (01-09-08 ) - ಶ್ರೀ ವಿಜಯಕುಮಾರ ಎಸ್. ಬಿ.
- ಭತ್ತದಲ್ಲಿ ಸಮಗ್ರ ಪೀಡೆ ನಿರ್ವಹಣೆ (05-09-08) - ಶ್ರೀ ಪ್ರಸನ್ನಕುಮಾರ್ ಎನ್.
- ಖುಷ್ಕಿ ತೋಟಗಾರಿಕೆ (08-09-08) - ಶ್ರೀ ಬಸವನಗೌಡ ಎಂ.ಜಿ.
- ಎರೆಗೊಬ್ಬರ ತಯಾರಿಕೆ ಮತ್ತು ಬಳಕೆ (10-09-08) - ಶ್ರೀ ಮಲ್ಲಿಕಾರ್ಜುನ ಬಿ. ಓ.
- ಕೃಷಿಯಲ್ಲಿ ಜೈವಿಕ ಗೊಬ್ಬರಗಳ ಬಳಕೆ (14-09-08) - ಡಾ. ಪ್ರದೀಪ್ ಹೆಚ್.ಎಂ.
- ಒಣ ಮೇವಿನ ಪೌಷ್ಟೀಕರಣ (17-09-08) - ಡಾ. ಜಯದೇವಪ್ಪ ಜಿ.ಕೆ.

# ಕೇಂದ್ರದಲ್ಲಿರುವ ಪ್ರಾತ್ಯಕ್ಷಿಕಾ ಘಟಕಗಳು



ಪಶು ಪಾಲನಾ ಘಟಕ



ಎರೆಹುಳು ಗೊಬ್ಬರ ತಯಾರಿಕಾ ಘಟಕ



ಅಲಂಕಾರಿಕ ಮೀನು ಘಟಕ



ಮೀನು ಕೃಷಿ ಮತ್ತು ಮರಿ ಪಾಲನಾ ಕೊಳ



ಅಜೋಲ್ಲಾ ಉತ್ಪಾದನಾ ಘಟಕ



ಕೃಷಿ ಪ್ರಾತ್ಯಕ್ಷಿಕಾ ತಾಕುಗಳು

## ಮುಂಬರುವ ತ್ರೈಮಾಸಿಕಕ್ಕೆ ಕೃಷಿ ಮುನ್ಸೂಚನೆಗಳು :

### ಭತ್ತದಲ್ಲಿ ಕಂದು ಜಿಗಿಹುಳು ನಿರ್ವಹಣೆ :

**ಲಕ್ಷಣ :** ಪ್ರೌಢ ಮತ್ತು ಅಪ್ಸರೆ ಜಿಗಿಹುಳು ಕಾಂಡದ ಮೇಲೆ ಆವರಿಸಿ ರಸ ಹೀರುತ್ತವೆ. ನಂತರ ಗರಿಗಳು ಹಳದಿ ಬಣ್ಣಕ್ಕೆ ತಿರುಗಿ ಸುಟ್ಟಂತೆ ಕಾಣುತ್ತವೆ. ಕಾಳು ತುಂಬದೆ ಜೊಳ್ಳಾಗುತ್ತವೆ.

**ಹತೋಟಿ ಕ್ರಮಗಳು :** ಇಮಿಡಾಕ್ಲೋಪ್ರಿಡ್ 200 ಎಸ್.ಎಲ್. (0.5 ಮಿ. ಲಿ. / ಲೀ ) ಅಥವಾ ಥಯೋಮೆಥಕ್ಸಮ್ 25 ಡಬ್ಲ್ಯು .ಜಿ. (0.5 ಗ್ರಾಂ/ಲೀ.) ಸಿಂಪಡಿಸಬೇಕು.

### ಬಾಳೆಯಲ್ಲಿ ಎಲೆ ಚುಕ್ಕೆ ರೋಗ ನಿರ್ವಹಣೆ :

**ಲಕ್ಷಣ :** ಎಲೆಯ ಮೇಲೆ ಕಂದು ಬಣ್ಣದ ತ್ರಿಕೋನಾಕೃತಿಯ ಚುಕ್ಕೆಗಳು ಕಂಡು ಬರುತ್ತವೆ. ರೋಗದ ತೀವ್ರತೆ ಅತಿಯಾದಾಗ ಚುಕ್ಕೆಗಳು ಗಾತ್ರದಲ್ಲಿ ದೊಡ್ಡದಾಗಿ ಕಂದು ಮಿಶ್ರಿತ ಕಪ್ಪು ಬಣ್ಣದಿಂದ ಕೂಡಿರುತ್ತದೆ.

**ಹತೋಟಿ ಕ್ರಮಗಳು :** ರೋಗಪೀಡಿತ ಎಲೆಗಳನ್ನು ಕಿತ್ತು ನಾಶಮಾಡಬೇಕು. ಬಸಿಗಾಲುವೆಗಳನ್ನು ನಿರ್ಮಿಸಬೇಕು. ಕಾರ್ಬನ್‌ಡೈಜಿಂ (1 ಗ್ರಾಂ/ಲೀ.) ಅಥವಾ ಹೆಕ್ಸಕೊನಜೊಲ್ (1 ಮಿ.ಲಿ./ಲೀ.) ಅಥವಾ ತಾಮ್ರದ ಆಕ್ಸಿಕ್ಲೋರೈಡ್ (3 ಗ್ರಾಂ/ಲೀ.)ನಿಂದ ಸಿಂಪಡಿಸಬೇಕು.ಅಡಿಕೆಯಲಿ

### ಅಡಿಕೆಯಲ್ಲಿ ಅಣಬೆ ರೋಗ ನಿರ್ವಹಣೆ :

**ಲಕ್ಷಣ :** ಜಿಲ್ಲೆಯಾದ್ಯಂತ ಅಡಿಕೆ ಮರಗಳಿಗೆ ಅಣಬೆ ರೋಗ ಕಾಣಿಸಿಕೊಂಡಿದೆ . ರೋಗ ಪೀಡಿತ ಮರದ ಹೊರಸುತ್ತಿನ ಎಲೆಗಳು ಪ್ರಾರಂಭದಲ್ಲಿ ಹಳದಿಯಾಗಿ ನಂತರ ಒಳಸುತ್ತಿನ ಎಲೆಗಳಿಗೆ ಹರಡುತ್ತದೆ. ರೋಗ ಉಲ್ಬಣಗೊಂಡಾಗ ಹೊರಎಲೆಗಳು ಸೊರಗಿ ಜೋತುಬಿಳುತ್ತವೆ. ಮರದ ಕಾಂಡದಲ್ಲಿನ ಬಿರುಕಗಳ ಮೂಲಕ ಕಂದು ಬಣ್ಣದ ದ್ರವ ಹೊರಬರುತ್ತದೆ.

**ಹತೋಟಿ ಕ್ರಮಗಳು** ರೋಗ ಪೀಡಿತ ಮರಗಳನ್ನು ಬುಡಸಮೇತ ಕಿತ್ತುಹಾಕಿ ನಾಶ ಮಾಡಬೇಕು. ರೋಗ ಹರಡದಂತೆ ಮಾಡಲು 2 ಅಡಿ ಆಳ 1 ಅಡಿ ಅಗಲ ಮರದ ಸುತ್ತಲೂ ಆಳದ ಕಂದಕವನ್ನು 1.5 ಅಡಿ ದೂರದಲ್ಲಿ ತೆಗೆದು 75 ರಿಂದ 100 ಗ್ರಾಂ ಮ್ಯಾಕೊಜೆಬ್ ಅಥವಾ ಕ್ಯಾಪ್ಟನ್ ನನ್ನು 25 ಲೀ. ನೀರಿನಲ್ಲಿ ಕರಗಿಸಿ ಈ ಕಂದಕಗಳಲ್ಲಿ ಸುರಿಯಬೇಕು. 2 ಕೆಜಿ ಬೇವಿನ ಹಿಂಡಿ ಮತ್ತು 100 ಗ್ರಾಂ ಟ್ರೈಕೊಡರ್ಮ ಕೊಡಬೇಕು. ರೋಗದ ಪ್ರಾರಂಭಿಕ ಹಂತದಲ್ಲಿ 3 ಮಿ.ಲಿ. ಹೆಕ್ಸಕೊನಜೋಲ್ ನ್ನು 100 ಮಿ.ಲಿ. ನೀರಿನಲ್ಲಿ ಬೆರೆಸಿ ಬೇರಿನ ಮೂಲಕ ಕೊಡಬೇಕು.

**ನೆಲಗಡಲೆ :** ಜಿಪ್ಸಂ ಹಾಕಿರದಿದ್ದರೆ ಮಣ್ಣಿನಲ್ಲಿ ತೇವಾಂಶವಿರುವಾಗ ಎಕರೆಗೆ 200 ಕೆಜಿ ಜಿಪ್ಸಂ ಅನ್ನು ಸಾಲುಗಳ ಪಕ್ಕದಲ್ಲಿ ಪಟ್ಟಿಯಂತೆ ಹಾಕಿ ಸಾಲುಗಳಿಗೆ ಮಣ್ಣು ಏರಿಸಿ, ಯಾವುದೇ ಕಾರಣಕ್ಕೂ 45 ದಿನಗಳ ನಂತರ ಬೆಳೆಯಲ್ಲಿ ನೆಲಗಡಲೆ ಬೆಳೆಯಲ್ಲಿ ಬಿತ್ತನೆಯಾಗಿ 15 ದಿನ, 30 ದಿನ ಹಾಗೂ 40 ದಿವಸಗಳಾಗಿರುವ ಕಡೆಗಳಲ್ಲಿ ಮಧ್ಯಂತರ ಬೇಸಾಯ ಮಾಡಿ, ಹೊಲದಲ್ಲಿ ಕಳೆಗಳಿಲ್ಲದಂತೆ ನೋಡಿಕೊಳ್ಳುವುದು. ಬಿತ್ತುವಾಗ ಅಂತರ ಬೇಸಾಯ ಮಾಡಬೇಡಿ.

**ಸೂರ್ಯಕಾಂತಿ :** ಅಂಗುಲ ಅಂತರದಲ್ಲಿ ಪ್ರತಿ ಗುಣಿಗೆ ಒಂದು ಸಸಿಯನ್ನು ಮಾತ್ರ ಉಳಿಸಿಕೊಂಡು ಉಳಿದ ಸಸಿಗಳನ್ನು ತೆಗೆದುಹಾಕಿ. ಬಿತ್ತನೆಯಾಗಿ 3 ರಿಂದ 4 ವಾರಗಳಾಗಿರುವ ಸೂರ್ಯಕಾಂತಿ ಬೆಳೆಯಲ್ಲಿ ಮಧ್ಯಂತರ ಬೇಸಾಯ ಬಿತ್ತನೆ ಬೀಜವನ್ನು ಇಮಿಡಾಕ್ಲೋಪ್ರಿಡ್ 70 ಡಬ್ಲ್ಯು. ಏಸ್. (5 ಗ್ರಾಂ ಪ್ರತಿ ಕೆಜಿ ಬೀಜಕ್ಕೆ) ನಿಂದ ಬೀಜೋಪಚಾರ ಮಾಡಬೇಕು. ಬಿತ್ತನೆಯಾಗಿ ಎರಡು ವಾರಗಳಾಗಿರುವ ಬೆಳೆಯಲ್ಲಿ 8 ಮಾಡಿ, ಕಳೆ ನಿರ್ಮೂಲ ಮಾಡಿ ನೀರಾವರಿ ಇರುವ ಕಡೆ ಸೂರ್ಯಕಾಂತಿಗೆ ಎಕರೆಗೆ 30 ಕೆಜಿ ಯೂರಿಯಾ ಒದಗಿಸಿ ಪೈರಿನ ಸಾಲುಗಳಿಗೆ ಮಣ್ಣು ಏರಿಸಬೇಕು.

ಸಂಪಾದಕರು ಮತ್ತು ಪ್ರಕಾಶಕರು : ಡಾ॥ ದೇವರಾಜ ಟಿ.ಎನ್., ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ - 577 002 , ಕರ್ನಾಟಕ
ಫೋನ್ ನಂ.: 08192-294568. ಮಿಂಚಂಚೆ : tkvk@taralabalu.org
ಸಹ ಸಂಪಾದಕರು : ಶ್ರೀ ಮಲ್ಲಿಕಾರ್ಜುನ ಬಿ. ಓ., ಶ್ರೀ ಬಸವನಗೌಡ ಎಂ.ಜಿ., ಡಾ॥ ಜಯದೇವಪ್ಪ ಜಿ.ಕೆ., ಕುಮಾರಿ ಕವಿತ ಪಿ., ಶ್ರೀ ರಘುರಾಜ ಜೆ., ಶ್ರೀ ಪ್ರಸನ್ನ ಕುಮಾರ ಎನ್., ಡಾ॥ ಪ್ರದೀಪ್ ಹೆಚ್. ಎಂ., ಶ್ರೀ ವಿಜಯಕುಮಾರ್ ಎಸ್.ಬಿ. ಮತ್ತು ಶ್ರೀ ಸಂತೋಷ್ ಬಿ.